ಅವು ಸಹ ಸೀನುವನ್ನು ತಮ್ಮೊಳಗೇ ಒಬ್ಬನೆಂದು ತಿಳಿದು ಸಹಬಾಳ್ವೆಯಿಂದ ಸಾಕತೊಡಗಿದವು.

ದಿನಕಳೆದಂತೆ ಪ್ರಾಣಿಗಳೇ ಸೀನುವಿಗೆ ತಮ್ಮ ಭಾಷೆಯನ್ನು ಕಲಿಸಿದವು, ಒಂದೊಂದು ಪ್ರಾಣಿಪಕ್ಷಿಗಳೂ ಒಂದೊಂದು ವಿದ್ಯೆಯನ್ನು ಅವನಿಗೆ ಕಲಿಸಿಕೊಟ್ಟವು. ಕೋತಿಯು ಮರ ಹತ್ತುವುದನ್ನು ಕಲಿಸಿಕೊಟ್ಟಿತು. ನವಿಲು ನಾಟ್ಯಮಾಡುವುದನ್ನು ಕಲಿಸಿತು. ಕೋಗಿಲೆ ಹಾಡುವುದನ್ನು ಕಲಿಸಿತು. ಹಾವು ತೆವಳುವುದನ್ನು ಹೇಳಿಕೊಟ್ಟಿತು. ಸಿಂಹರಾಜನು ಆಡಳಿತಾತ್ಮಕ ವಿಚಾರಗಳನ್ನು ಕಲಿಸಿಕೊಟ್ಟನು. ಚಿರತೆ ಓಡುವ ಕೌಶಲ್ಯವನ್ನು ಕಲಿಸಿತು. ಜಿಂಕೆ ನೆಗೆಯುವುದನ್ನು ತಿಳಿಸಿತು. ಕಾಗೆ ಹಂಚಿ ತಿನ್ನುವ ಗುಣವನ್ನು ರೂಢಿಸಿತು. ನರಿ ಚಾಣಾಕ್ಷತನವನ್ನು ಕಲಿಸಿಕೊಟ್ಟಿತು. ಹೀಗೆ ಸೀನನು ಕೆಲವೇ ವರ್ಷಗಳಲ್ಲಿ ಸಕಲ ವಿದ್ಯಾಪಾರಂಗತನಾದನು. ಯಾವುದೇ ಅಪಾಯಗಳೆದುರಾದಾಗ ಅದರಿಂದ ಪಾರಾಗುವ ತಂತ್ರವನ್ನು ಕಲಿತುಕೊಂಡನು. ಅವನಿಗೆ ಸುಮಾರು ಹತ್ತು ವರ್ಷಗಳಾಗಿದ್ದವು ಎನ್ನಿಸುತ್ತದೆ. ಆಗ ಎಲ್ಲ ಪ್ರಾಣಿಗಳೂ ಸೇರಿ ಸಭೆಯೊಂದನ್ನು ಮಾಡಿ ಸೀನು ನಾಡಿನವ. ಅವನು ಮೊದಲಿನಂತೆ ತಮ್ಮ ಜೊತೆ ಇರುವುದು ಶ್ರೇಯಸ್ಕರವಲ್ಲವೆಂದೂ, ಅವನನ್ನು ನಾಡಿಗೆ ಕಳಿಸುವುದೇ ಕ್ಷೇಮವೆಂದು ತೀರ್ಮಾನಿಸಿ ಅದನ್ನು ಸೀನುಗೆ ತಿಳಿಸಿದವು. ತನಗೆ ಇಷ್ಟವಿಲ್ಲದಿದ್ದರೂ ಪ್ರಾಣಿಗಳ ಮಾತಿಗೆ ಗೌರವ ಕೊಡಬೇಕೆಂದು ನಿರ್ಧರಿಸಿ ಅವುಗಳ ಇಚ್ಛೆಯಂತೆ ಕಾಡನ್ನು ತೊರೆದು ನಾಡನ್ನು ಸೇರಲು ಒಪ್ಪಿದನು.

ಒಂದು ಶುಭದಿನದಂದು ಕಾಡುಪ್ರಾಣಿಗಳೆಲ್ಲ ಸೇರಿ ಸೀನುವಿಗೆ ಭಾವುಕವಾಗಿ ಬೀಳ್ಕೊಡುಗೆ ನೀಡಿದವು. ಕಾಡಿನಿಂದ ನಾಡಿಗೆ ಬಂದ ಸೀನುವಿನ ಅರೆಮೈ ಉಡುಪುಗಳನ್ನೂ, ವಿಚಿತ್ರ ಆಂಗಿಕ ಲಕ್ಷಣಗಳನ್ನೂ, ಹೊಸದಾದ ಭಾಷಾಶೈಲಿಯನ್ನೂ ಕಂಡು ಜನರು ನಿಬ್ಬೆರಗಾದರು. ಸ್ವತಃ ಅವನ ತಂದೆ ತಾಯಿ ಅವನನ್ನು ಗುರುತಿಸದಾದರು. ಇನ್ನು ಊರಿನ ಜನರಂತೂ ಕಾಡಿನಿಂದ ಯಾವುದೋ ವಿಚಿತ್ರ ಪ್ರಾಣಿ ಬಂದಿರುವುದೆಂಬಂತೆ ಅವನನ್ನು ಅನುಮಾನದ ದೃಷ್ಟಿಯಲ್ಲಿ ಕಂಡರು. ಅವನ ಬಳಿಗೆ ತೆರಳಲೂ ಹಿಂದೇಟು ಹಾಕಿದರು. ಚಿಕ್ಕ ಮಕ್ಕಳಂತೂ ಅವನಿಗೆ ಕಲ್ಲೆಸೆಯುವುದು, ಓಡಿಸುವುದೂ ಮಾಡತೊಡಗಿದರು.

ಜನರ ಈ ವರ್ತನೆಯಿಂದ ಸೀನ ಸಾಕಷ್ಟು ಹಿಂಸೆ ಪಡುವಂತಾಯಿತು. ಒಂದು ದಿನ ಊರ ಹೊರಗಿನ ಜಗುಲಿಯಲಿ ಕುಳಿತು ತನ್ನ ಜೀವನದ ಅರ್ಧ ಭಾಗ ನಾಡಿನಲ್ಲಿಯೂ, ಉಳಿದದ್ದನ್ನು ಕಾಡಿನಲ್ಲಿಯೂ ಕಳೆದಿದ್ದನು. ಅವನು ನಾಡಿನ ಜನರನ್ನೂ, ಕಾಡಿನ ಪ್ರಾಣಿಗಳನ್ನೂ ತುಂಬಾ ಸನಿಹದಿಂದ ಕಂಡಿದ್ದ. ಇಬ್ಬರ ಜೊತೆಯೂ ಜೀವನ ಕಳೆದಿದ್ದ, ಇಬ್ಬರಲ್ಲಿ ತನಗೆ ಹಿತವರು ಯಾರೆಂದು ಯೋಚಿಸಿದ. ಇಬ್ಬರ ವರ್ತನೆಗಳನ್ನೂ ತುಲನೆ ಮಾಡಿದ, ಕೊನೆಗೆ ಅವನೊಂದು ತೀರ್ಮಾನಕ್ಕೆ ಬಂದ. ಸ್ವಾರ್ಥ, ಅಸೂಯೆ ತುಂಬಿರುವ ನಾಡಿನ ಜನರಿಗಿಂತ ನಿಸ್ವಾರ್ಥ ಮನೋಭಾವ, ಸಹಬಾಳ್ವೆ ಜೀವನ ನಡೆಸುತ್ತಿರುವ ಕಾಡು ಮೃಗಗಳೇ ಉತ್ತಮವೆಂದು ನಿರ್ಧರಿಸಿ ಪುನಃ ಕಾಡಿನೊಳಗೆ ಸೇರಿಕೊಂಡನು. ■

## ಕುಂಚ ಪ್ರಪಂಚ






**ವೇದಾಂತ್ ಆರ್.**
4ನೇ ತರಗತಿ, ಇನ್‌ಸೈಟ್ ಅಕಾಡೆಮಿ, ಬೆಂಗಳೂರು



**ಈಶಾನ್ವಿ ವರ್ಣೇಕರ್**
ಯುಕೆಜಿ, ಬಿಆರ್‌ವಿ ಸ್ಕೂಲ್, ಶೃಂಗೇರಿ



'ಸುಧಾ' ಇದು ಮಕ್ಕಳ ಭಾವ ವಿಕಾಸಕ್ಕೆ ವೇದಿಕೆ. ಅವರೇ ಬಿಡಿಸಿದ ವರ್ಣಚಿತ್ರ–ರೇಖಾಚಿತ್ರಗಳನ್ನು ಅವರ ವೈಯಕ್ತಿಕ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ. **ವಿಳಾಸ:** editorsu@sudha.co.in